## 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.21-2015** **ಪಿ . ಡಬ್ಲ್ಯು: 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಜಿ.ಶಿವಕುಮಾರಿ<br>ಮೈಸೂರು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 29-10-2022. |

**ಮುಂದುವರೆದ ಪಾಟೀ ಸವಾಲು: ಶ್ರೀ ಎನ್.ಆರ್ ವಕೀಲರಿಂದ:**

ದಿ.26-09-2012 ರಂದು ಕ್ರಯದ ಕರಾರು ಪತ್ರವನ್ನು ಪತ್ರ ಬರಹಗಾರರಾದ ನಾಗರಾಜು ರವರು ಬಳಿ ಮಾಡಿಸಿರುತ್ತೇವೆ, ಆದರೆ ಸಮಯ ನೆನಪಿಲ್ಲ. ಸದರಿ ದಿನಾಂಕಂದು ನಾನು, ನನ್ನ ತಂಗಿಯ ಗಂಡ ಮತ್ತು ನನ್ನ ಪತಿಯವರ ತಂಗಿಯ ಗಂಡ ಮೂವರು ಪ್ರತ್ಯೇಕ ಪ್ರತ್ಯೇಕವಾಗಿ ಕ್ರಯದ ಕರಾರನ್ನು ಮಾಡಿಕೊಂಡಿರುತ್ತೇವೆ ನಾನು ಹೇಳುವಂತೆ ದಿ.26-09-2012 ರಂದು ಪ್ರತಿವಾದಿ ನನಗೆ ಯಾವುದೇ ಕ್ರಯದ ಕರಾರುಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯವರಿಗೆ ರೂ.10,000/-ಗಳನ್ನು ಸಾಲ ನೀಡಿದ್ದು, ಆ ಸಮಯ ಭದ್ರತೆಗಾಗಿ ನೀಡಿದ್ದ ಸಹಿ ಮಾಡಿದ ಛಾಪಾಕಾಗದವನ್ನು ದುರುಪಯೋಗಪಡಿಸಿಕೊಂಡು ನಿಪಿ-1 ಅನ್ನು ಸೃಷ್ಟಿಸಿ ಪ್ರತಿವಾದಿ ವಿರುದ್ಧ ಈ ದಾವಾವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನೋಟಿಸ್ ನೀಡಿದ ನಂತರ ಪ್ರತಿವಾದಿ ನನಗೆ ಮರುಪಾವತಿ ಮಾಡಬೇಕಾದ ರೂ.10,000/- ಗಳನ್ನು ಮರುಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ, ಇದರಿಂದಾಗಿ ಕ್ರಯದ ಕರಾರಿನಲ್ಲಿ ನಮೂದು ಆಗಿರುವ ಸಂಪೂರ್ಣ ಹಣ ನನಗೆ ಮರುಪಾವತಿ ಆಗಿರುವುದರಿಂದ ನಾನು ದಾವಾದಲ್ಲಿ ಕೋರಿರುವ ಪರಿಹಾರಕ್ಕೆ ಅರ್ಹಳಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**